# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.69/2024

Pw-08

Cw-02

ಸಾಕ್ಷಿದಾರರ ಹೆಸರುಃ ಶ್ರೀ ವಸಂತ ಎಲಿಗಾರ

ತಂದೆಃಗಂಡನ ಹೆಸರುಃ ಶ್ರೀ ಲಕ್ಷ್ಮಣ

ವಯಸ್ಸುಃ 62 ವರ್ಷ

ಉದ್ಯೋಗಃ ಮನೆ ಕೆಲಸ

ವಾಸ ಸ್ಥಳಃ ಕರೂರು ತಾಃ ರಾಣೇಬೆನ್ನೂರು

**ದಿನಾಂಕ:22.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಈಗ್ಗೆ ಎರಡು ವರ್ಷಗಳ ಹಿಂದೆ ನನ್ನ ಸಂಬಂಧಿ ಲಕ್ಷ್ಮೀ ತೀರಿಕೊಂಡಿದ್ದರು. ಆಗ ನಾನು ಅವರನ್ನು ನೋಡಲು ಹರಿಹರ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆನು. ನಾನು ಸದರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಲಕ್ಷ್ಮೀಯವರ ಶವ ನೋಡಿದೆನು. ಆಗ ಪೊಲೀಸರು ಅಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಶವ ಪಂಚನಾಮೆ ಜರುಗಿಸಿ, ಪೋಟೋಗಳನ್ನು ತೆಗೆದುಕೊಂಡು ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಸದರಿ ಶವ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-12 ಎಂದು ಗುರುತಿಸಿದ್ದು, ನನ್ನ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಪೊಲೀಸರು ತೆಗೆದ 2 ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-13 ಮತ್ತು 14 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

2. ಈ ಪ್ರಕರಣದ ಪಿರ್ಯಾದಿ ನನ್ನ ಚಿಕ್ಕಪ್ಪನ ಮಗನ ಹೆಂಡತಿ. ಶವ ಪಂಚನಾಮೆಯನ್ನು ನಾನು ಪೊಲೀಸರಿಗೆ ಹೇಳಿ ಬರೆಸಿಲ್ಲ ಎಂದರೆ ನಿಜ. ಶವ ಪಂಚನಾಮೆಯಲ್ಲಿ ಏನು

ಬರೆಯಲಾಗಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ನಿಜ. ಪೊಲೀಸರು ಪೋಟೋಗಳನ್ನು ಏಕೆ ತೆಗೆದುಕೊಂಡರು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈಗ ನನಗೆ ನಿಪಿ–13 ಮತ್ತು 14 ರ ಪೋಟೋಗಳನ್ನು ತೋರಿಸುತ್ತಿದ್ದು, ಅದರಲ್ಲಿ ಪಿಎಸ್ಐ–ಸಂತೋಷ ಪಾಟೀಲ್ ರವರು ಇರುತ್ತಾರೆ. ಪೊಲೀಸರು ಸದರಿ ಪೋಟೋಗಳನ್ನು ತೆಗೆದುಕೊಳ್ಳುವಾಗ ಮಧ್ಯಾಹ್ನ 12–1 ಗಂಟೆಯಾಗಿತ್ತು.

3. ಪೊಲೀಸರು ಶವ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿದರ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.